ಬರ್ತೇನಿ. ಲಗೂ ಬರ್ತೇನಿ. ಹೊರಗ ಕೀಲಿ ಹಾಕ್ಕೊಂಡು ಹೋಗ್ತೇನಿ. ನೀ ಆರಾಮ ಮಲಕೊಂಡು ನಿದ್ದಿ ಮಾಡು" ಎಂದು ಹೇಳಿ ತಲೆಯ ಮೇಲೆ ಕೈಯಾಡಿಸಿ ಹೊರಗೆ ಬಂದು ಬಾಗಿಲು ಹಾಕಿಕೊಂಡ ಶಬ್ದ ಮಾಡಿದೆ. ಮತ್ತೆ ನಿಧಾನಕ್ಕೆ ತೆರೆದು ನನ್ನ ಕೋಣೆಗೆ ಬಂದು ಮೇಕಪ್ ಮಾಡಿಕೊಂಡೆ. ನೀಲಿ ಬಣ್ಣ, ಜಟೆ, ಚಂದ್ರ, ರುದ್ರಾಕ್ಷಿ ಮಾಲೆ, ಗಜ ಚರ್ಮಾಂಬರಗಳನ್ನೆಲ್ಲ ಧರಿಸಿಕೊಂಡು ಚಿಕ್ಕದಾಗಿ ಮೂರನೇ ಕಣ್ಣನ್ನು ಬರೆದುಕೊಂಡು ತ್ರಿಶೂಲ ಹಿಡಿದು ಸೌಮ್ಯ ಸ್ವರೂಪದ ಶಿವನಾದೆ. ಒಮ್ಮೆ ಕನ್ನಡಿಯಲ್ಲಿ ನೋಡಿಕೊಂಡು ನಾನೇ ಸಣ್ಣಗೆ ಕಂಪಿಸಿದೆ. ಮೆಲ್ಲನೆ ಅವ್ವನ ಕೋಣೆಯಲ್ಲಿ ಇಣುಕಿದೆ. ತಿಂಡಿ ತಿಂದು ಔಷಧಿ ತೆಗೆದುಕೊಂಡು ಅವ್ವ ಮಲಗಿದ್ದಳು. ರೂಢಿಯಂತೆ 'ಅವ್ವಾ' ಎನ್ನಲು ಹೊರಟವನು ಸುಧಾರಿಸಿಕೊಂಡು "ಭಕ್ತೆ" ಎಂದು ಮೆಲ್ಲಗೆ ಕರೆದೆ. ಕಣ್ಣು ತೆರೆದ ಅವ್ವ ಕ್ಷಣಕಾಲ ನಂಬಲೇ ಇಲ್ಲ. ತನಗೆಲ್ಲೋ ಭ್ರಾಂತು ಎಂಬಂತೆ 'ಶಂಕರಾ, ಶಂಕರಾ' ಎನ್ನುತ್ತ ಕಣ್ಣು ಮುಚ್ಚಿಬಿಟ್ಟಳು. ಮತ್ತೊಂದು ಹೆಜ್ಜೆ ಮುಂದೆ ಬಂದು "ಭಕ್ತೆ" ಎಂದು ಕರೆದೆ. ಕಣ್ಣು ಬಿಟ್ಟವಳು "ಸ್ವಾಮೀ ಶಿವಶಂಕರಾ, ಖರೇನ ನೀನ ಏನಪಾ? ನಂಬಲಿಕ್ಕೇ ಆಗವಲ್ತು. ಅರುಣನೂ ಮನ್ಯಾಗಿಲ್ಲ...'' ಎಂದು ತನ್ನನ್ನು ತಾನೇ ಎಡಗೈಯಿಂದ ಜಿಗುಟಿಕೊಂಡಳು. ಆಶೀರ್ವಾದದ ಹಸ್ತ ತೋರಿಸಿದೆ. ಆನಂದಾಶ್ರುಗಳನ್ನು ಸುರಿಸುತ್ತ "ಅಪ್ಪಾ ತಂದೇ, ನನ್ನ ಈ ಕಷ್ಟ ಪರಿಸ್ಥಿತಿಯಿಂದ ಪಾರು ಮಾಡಪಾ. ನಿನ ಕಡೇರೆ ಕರಿಸಿಗೊ ಇಲ್ಲಾ ಆರಾಮರೇ ಮಾಡು" ಎಂದು ಕೊನೆಗೆ ಅಳತೊಡಗಿದಳು. ನಾನು ಈ ಪ್ರಶ್ನೆಗಳನ್ನೆಲ್ಲಾ ಊಹಿಸಿರಲಿಲ್ಲ. ಒಳ್ಳೆ ಪೀಕಲಾಟವಾಗಿತ್ತು ನನಗೆ. "ನಿನ್ನ ಹಿಂದಿನ ಜನ್ಮದ ಕರ್ಮಗಳನ್ನು ಇದೇ ರೀತಿಯಲ್ಲಿ ಕಳೆದುಕೊಳ್ಳಬೇಕು ಭಕ್ತೆ" ಎಂದೆ. ಎಲ್ಲೋ ಕೇಳಿದ ಡೈಲಾಗು. ಆದರೆ ಅವಳ ಮುಖ ಕಾಂತಿಹೀನವಾಯಿತು. ಹತ್ತಿರ ಹೋದರೆ ಅಪಾಯವೆಂದು ತಿಳಿದು ದೂರವೇ ನಿಂತೆ.

ಒಮ್ಮೆಲೆ ಸಹಿ ಮಾಡೆಂದು ಕೇಳಲು ಸಾಧ್ಯವಿಲ್ಲ. ನಿಧಾನವಾಗಿ ವಿಷಯಕ್ಕೆ ಬರಬೇಕು ಎಂದುಕೊಂಡೆ. "ನಿನ್ನ ಚಿಂತೆ ಏನೆಂದು ಹೇಳು ಭಕ್ತೆ?" ಎಂದೆ. ಈಗ ನಂಬಿದಂತೆ ಕಂಡ ಅವ್ವ ತುಸು ಸಾವರಿಸಿಕೊಂಡು "ಏನಂತ ಹೇಳ್ಲಪಾ ದೇವರ, ನಮ್ಮ ಅರುಣಗ ಬಿಸಿನೆಸ್‌ನ್ಯಾಗ ಭಾಳ ಲಾಸ್ ಆಗೇದ. ಭಾಳ ಫಜೀತಿ ಪಡ್ಲಿಕ್ಹತ್ತಾನ. ಆಮ್ಯಾಲೆ... ಇಷ್ಟು ದಿನಾ ನಮ್ಮ ಜೋಡೀನ ಇದ್ದ ನನ್ನ ಮೊಮ್ಮಗಳು ಸಹನಾ ಇಲ್ಲೇ ಹಾಸ್ಟೆಲ್ಲಿಗೆ ಸೇರ್ಯಾಳ. ಅಲ್ಲೆ ಅಕಿಗೆ ಛೊಲೊ ಅನಸವಲ್ತಂತ. ಗೆಳತೇರ ಸಹವಾಸ ಛೊಲೊ ಇಲ್ಲಂತ. ಊಟ ಸೇರವಲ್ತಂತ. ಅಳತಾಳ. ನನಗೂ ಕೇಳಲಿಕ್ಕಾಗೂದಿಲ್ಲ. ತ್ರಾಸಾಗ್ತದ. ನನ ಮಗಳು ಪ್ರಭಾಗೂ ಭಾಳ ಚಿಂತ್ಯಾಗೇದ. ಅಕಿಗೆ ಸೌದಿ ಬಿಟ್ಟು ಬರ್ಲಿಕ್ಕಾಗೂದಿಲ್ಲ. ಮಗ ಅಲ್ಲೇ ಓದ್ಲಿಕ್ಹತ್ತಾನ. ಈ ಹುಡಿಗ್ಯರೇ ಇಲ್ಲೆ ಒಂಥರಾ ಹೆದರಿಧಂಗ... ಹೇಸಿಗೊಡ್ಡಂಗ ಮಾಡ್ಲಿಕ್ಹತ್ತದ. ಏನ್ಮಾಡ್ಲೆಪಾ. ನೀನ ದಾರಿ ತೋರ್ಸು" ಎಂದವಳ ಕಣ್ಣಲ್ಲಿ ನೀರು.

ಅರೆ, ಈ ವಿಷಯ ನನಗೆ ಗೊತ್ತೇ ಇರಲಿಲ್ಲ. ಸುಜಾತಳ ಭಯದಿಂದ ಅಕ್ಕ, ಅವ್ವ ಇಬ್ಬರೂ ನನಗೆ ಹೇಳಿಲ್ಲ. ಕ್ಷಣಕ್ಕೊಮ್ಮೆ "ಮಾಮಾ" ಎಂದು ಹಾರಾಡುವ ಸಹನಾಳಾದರೂ ಹೇಳಬಾರದಿತ್ತೆ? "ಛೆ!" ಎಂದುಕೊಂಡೆ. ನಾನು ಅವಳ ಹಾಸ್ಟೆಲ್ಲಿಗೆ ಹೋಗಿ ಸುಮಾರು ದಿನಗಳಾದವು. ಅಷ್ಟರಲ್ಲೇ ಫೋನಿನ ಘಂಟೆ ಬಾರಿಸತೊಡಗಿತ್ತು. ತೆಗೆದುಕೊಳ್ಳಲೂ ಆಗದೇ ಬಿಡಲೂ ಆಗದೇ ಧರ್ಮಸಂಕಟದಲ್ಲಿ ಸಿಲುಕಿಕೊಂಡೆ. ಪಕ್ಕದ ಮನೆಯ ಅನ್ನಪೂರ್ಣಾಬಾಯಿ ಕಿಟಕಿಯಿಂದ "ಏ ಅರುಣಾ, ಮನ್ಯಾಗ ಯಾರಿಲ್ಲೇನೋ? ಫೋನು ಒಂದ ಸಮಾ